**ಜನರನ್ನು ಮಾಯೆಯಿಂದ ಪಾರುಮಾಡಿ ಅವರಿಗೆ ಮುಕ್ತಿಯನ್ನು ದೊರಕಿಸಿಕೊಡುತ್ತದೆ. ವೇದಾಂತದ ಪ್ರಾಮಾಣ್ಯವು ಕಾಲ, ದೇಶ, ಪಾತ್ರಗಳ ಮಿತಿಗೆ ಒಳಪಡದೆ ಇರುವುದರಿಂದ ಅದು ಸಮಸ್ತ ಮಾನವತೆಗೂ ಶಾಶ್ವತವಾದ ವಿಶ್ವಧರ್ಮವನ್ನು ಬೋಧಿಸುವ ಏಕೈಕ ಶಾಸ್ತ್ರವಾಗಿ ಉಳಿದಿದೆ.''** *(ಅಲ್ಲೇ, ಪು. ೩೮೪)*

ಸತ್ಯವನ್ನು ಇಂದ್ರಿಯಗ್ರಹಿಕೆ ಮತ್ತು ಅವುಗಳ ಆಧಾರದಿಂದ ನಿರೂಪಿತವಾದ ತರ್ಕದಿಂದ ಮಾತ್ರ ನಿರ್ಣಯಿಸುವ ಆಧುನಿಕ ವಿಜ್ಞಾನದ ವಿಧಾನವನ್ನು ಸನಾತನ ಧರ್ಮ ಅವಲಂಬಿಸುವುದಿಲ್ಲ. ನಮ್ಮಲ್ಲಿ 'ಪ್ರತ್ಯಕ್ಷ'ವೆಂಬುದು ಒಂದು ಪ್ರಮಾಣವಾಗಿದ್ದರೂ, ಸತ್ಯವನ್ನು ನಿರ್ಣಯಿಸಲು ಅದು ಸಾಧನವಲ್ಲ. ಹಿಂದಿನ ಋಷಿಮುನಿಗಳ ಅನುಭವದಿಂದ ನಿರೂಪಿತವಾದ ವೇದಗಳೇ (ಅಥವಾ 'ಶಬ್ದ') ನಿಜವಾದ ಪ್ರಮಾಣ. '**ಶಬ್ದ**'ವೆಂದರೆ ವೇದಗಳು ಎಂದೂ, 'ಸಾಕ್ಷಾತ್ಕಾರದ ಮೂಲಕ ಸತ್ಯದರ್ಶನವನ್ನು ಪಡೆದವನ ಮಾತು' ಎಂದೂ ಅರ್ಥ. ಈ ದೃಷ್ಟಿಯಲ್ಲಿ '**ಶಬ್ದ ಪ್ರಮಾಣ**'ವೆಂದರೆ 'ವೇದಗಳು ಹಾಗೂ ಸಂತರ ಅನುಭವದ ನುಡಿ' ಎಂದು ಅರ್ಥೈಸಬೇಕು. ಆದ್ದರಿಂದಲೇ 'ವೇದಗಳು ಆತ್ಯಂತಿಕ ಪ್ರಮಾಣ; ಅವುಗಳ ಮಾತು ಅಂತಿಮ' ಎಂಬುದು ನಮ್ಮ ತತ್ತ್ವಗಳ ಆಧಾರಸ್ತಂಭವಾಗಿದೆ. ಅದೇ ರೀತಿ 'ಗುರುಹಿರಿಯರ ಮಾತು ಮೀರಬಾರದು' ಎಂಬ ಆದರ್ಶಕ್ಕೂ ಇದೇ ಮೂಲ; ಏಕೆಂದರೆ ನಮ್ಮ ಪರಂಪರೆಯ ಪ್ರಕಾರ ಸತ್ಯವೆಂಬುದು ನಿರ್ಧರಿಸಲ್ಪಡುವುದು ಅನುಭವದ ಮೂಲಕ. ನಿಜವಾಗಿಯೂ ಅಂಥ ಅನುಭವಗಳನ್ನು ಪಡೆದವರೇ ಸಂತರು, ಗುರುಹಿರಿಯರು; ತನ್ನ ಅರಿವಿಗೆ ನಿಲುಕದ ಉನ್ನತ ಜ್ಞಾನವನ್ನು ಪಡೆಯಲು ಸಾಧಕನು ಗುರುವಿಗೆ, ಸನಾತನ ಧರ್ಮ ಹೇಳುವ ಸತ್ಯಕ್ಕೆ ಸಂಪೂರ್ಣ ತನ್ನನ್ನು ಸಮರ್ಪಿಸಿಕೊಳ್ಳುವುದೊಂದೇ ಮಾರ್ಗ. ಆದ್ದರಿಂದ ವೈಜ್ಞಾನಿಕ ವಿಧಾನದಂತೆ ಸನಾತನ ಧರ್ಮವು ಸತ್ಯದ 'ಪ್ರದರ್ಶನ' ಅನಿವಾರ್ಯವೆನ್ನುವುದಿಲ್ಲ; ಸತ್ಯದ ಸಾಕ್ಷಾತ್ಕಾರ, ನೇರ ಅನುಭವ ಅತ್ಯಗತ್ಯವೆನ್ನುತ್ತದೆ. ಅದು ಪೂರ್ಣಗೊಂಡಾಗಲೇ ಎಲ್ಲ ಸಂದೇಹಗಳ ನಿವಾರಣೆ; ಎಲ್ಲ ಸಾಧನೆಗಳ ಉದ್ದೇಶ ಪ್ರಾಪ್ತಿ.

ಅವಿನಾಶಿಯಾದ, ಆದಿ ಅಂತ್ಯಗಳಿಲ್ಲದ 'ಜ್ಞಾನ'ವೇ ವೇದ, ಅದನ್ನು ಅವಲಂಬಿಸಿದ ಜೀವನವಿಧಾನವೇ **ಸನಾತನ ಧರ್ಮ**. ಅದು ಎಂದೂ ನಾಶವಾಗದು, ಆದ್ದರಿಂದಲೇ ಅದು '**ಸನಾತನ**'. ಈ ಧರ್ಮ ಕಾಲದ ದವಡೆಯಲ್ಲಿ ಸಿಕ್ಕಿ ನುಚ್ಚುನೂರಾದಂತೆ ಕಾಣಿಸಬಹುದು; ಆದರೆ ಅವನತಿಯ ಕೊನೆಯ ಕ್ಷಣದಲ್ಲಿ ಅದನ್ನು ಮತ್ತೆ ಉದ್ಧರಿಸುವ ವ್ಯಕ್ತಿಗಳು ಹುಟ್ಟಿಬರುತ್ತಾರೆ. ಅವರನ್ನು ದೇವರೆಂದೂ, ಅವತಾರವೆಂದೂ ಜನ ಅರಿತು ಪೂಜಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸ್ವಾಮೀಜಿ ಶ್ರೀರಾಮಕೃಷ್ಣರನ್ನು ಅವತಾರ ವರಿಷ್ಠರೆಂದೇ ಸಾರುತ್ತಾರೆ. *(ಕೃತಿಶ್ರೇಣಿ ೫, ಪು. ೩೮೬-೮೭).*

ಸನಾತನ ಧರ್ಮವನ್ನು ಕುರಿತು ಶ್ರೀರಾಮಕೃಷ್ಣರು ಹೇಳುವ ಮಾತೂ ಗಮನಾರ್ಹ: **''ಋಷಿಗಳ ಧರ್ಮ, ಎಂದರೆ ಸನಾತನ ಧರ್ಮ ಅನಾದಿಕಾಲದಿಂದ ಬದುಕಿ ಬಂದಿದೆ. ಅನಂತಕಾಲದವರೆಗೆ ಬದುಕಿಯೂ ಇರುತ್ತದೆ. ಈ ಸನಾತನ ಧರ್ಮದಲ್ಲಿ ನಿರಾಕಾರಪೂಜೆ, ಸಾಕಾರಪೂಜೆ, ಈ ರೀತಿಯಾಗಿ ಎಲ್ಲಾ ವಿಧದ ಪೂಜೆಗಳೂ ಇವೆ; ಜ್ಞಾನಮಾರ್ಗ, ಭಕ್ತಿಮಾರ್ಗ ಎಲ್ಲಾ ಇವೆ. ಉಳಿದ ಧರ್ಮಗಳೆಲ್ಲ, ಎಂದರೆ ಆಧುನಿಕ ಧರ್ಮಗಳು ಕೆಲವು ಕಾಲ ಬದುಕಿರುತ್ತವೆ, ಅನಂತರ ನಶಿಸುತ್ತವೆ.''**

*(ಶ್ರೀರಾಮಕೃಷ್ಣ ವಚನವೇದ, ಸಂಪುಟ ೧, ಪು.೪೨೬)*

ಸಂತರ ಅನುಭವಗಳು, ಅವರ ಉಪದೇಶಗಳು ಈ ಸನಾತನ ಧರ್ಮದ ಅಂಗಗಳೇ. ಏಕೆಂದರೆ ಅವು ದಿವ್ಯವಾದ, ಅವಿನಾಶಿಯಾದ ಸತ್ಯದ ಸ್ಪರ್ಶದಿಂದ ಪುನೀತಗೊಂಡವುಗಳು. ಕಾಲ, ದೇಶ, ಸನ್ನಿವೇಶಗಳಿಂದ ಬದ್ಧವಾದ ಪ್ರಾಪಂಚಿಕ ಬದಲಾವಣೆಗಳು ಈ ಬಗೆಯ ಜ್ಞಾನವನ್ನು ಬೋಧಿಸಲಾರವು. ಸಂತರ ಅನುಭವಗಳೇ ವೇದರೂಪದ ಜ್ಞಾನವಾಗಿಯೂ, ವೇದಾಂತದ ಸತ್ಯವಾಗಿಯೂ ಹರಿದುಬಂದಿದೆ; ಇದನ್ನು ಅವಲಂಬಿಸುವ ಧರ್ಮವೇ ಸನಾತನ ಧರ್ಮ; ಅದೇ ನಮ್ಮ ಸಂಸ್ಕೃತಿಯ ಬೇರು.

- ೪ -

ಆಧುನಿಕ ಯುಗದ ವಿಜ್ಞಾನ, ತಂತ್ರಜ್ಞಾನ ಹಾಗೂ ಇನ್ನಿತರ ಆವಿಷ್ಕಾರಗಳನ್ನು ಸನಾತನಧರ್ಮ ತಿರಸ್ಕರಿಸುವುದಿಲ್ಲ. ಅದರ ಇನ್ನೊಂದು ರೂಪವೇ ಆಗಿರುವ ವೇದಾಂತ ವೈಜ್ಞಾನಿಕ ದೃಷ್ಟಿಕೋನವನ್ನು ಹೊಂದಿದೆ. ವಿಚಾರ, ಗ್ರಹಿಕೆ, ವಿಶ್ಲೇಷಣೆ, ಅನುಭವ ಈ ಎಲ್ಲ ಬಗೆಯ ಪ್ರಯೋಗಗಳಿಗೂ ವೇದಾಂತ ಅವಕಾಶ ನೀಡುತ್ತದೆ. ವೇದಾಂತದ ಸೂಕ್ಷ್ಮತತ್ತ್ವಗಳಿಗೂ ಭೌತಶಾಸ್ತ್ರದ ಅತ್ಯುಚ್ಚನಿಯಮಗಳಿಗೂ ಅನೇಕ ಹೋಲಿಕೆ, ಸಾಮ್ಯತೆಗಳಿರುವುದನ್ನು ಅನೇಕರು ಗುರುತಿಸಿದ್ದಾರೆ. ವಿಜ್ಞಾನವನ್ನು ವೇದಾಂತದ ದೃಷ್ಟಿಯಿಂದ ಅಧ್ಯಯನ ಮಾಡುವ, ವಿಶ್ಲೇಷಿಸುವ ಕಾರ್ಯ ಈ ಆಧುನಿಕ ಯುಗದಲ್ಲಿ ನಡೆಯಬೇಕಾಗಿದೆ.

ಸನಾತನಧರ್ಮದ ಆಧ್ಯಾತ್ಮಿಕ ಮನೋಭಾವ ಹಲವು ಬಗೆಯ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳಿಗೆ ಉತ್ತರ ನೀಡುತ್ತದೆ. ಅದು ಯಾವುದನ್ನೂ ವಿರೋಧಿಸದೆ, ಎಲ್ಲವನ್ನೂ ಮುಕ್ತವಾಗಿ ಸ್ವೀಕರಿಸುತ್ತದೆ. ವೈಚಾರಿಕ, ವೈಜ್ಞಾನಿಕ, ತಾತ್ತ್ವಿಕ ಅನ್ವೇಷಣೆಗಳು ಏಕತೆಯತ್ತ ಸಾಗುವುದನ್ನೇ ಸನಾತನಧರ್ಮ ಸಾರುತ್ತದೆ. ಇದೇ ಭಾರತದ ಸಹಜಧರ್ಮ; ಇದೇ ನಮ್ಮ ಸಂಸ್ಕೃತಿಯ ಬೆನ್ನೆಲುಬು. ಸಮಾಜ, ದೇಶ, ವಿಶ್ವ, ಸಮಸ್ತ ಜೀವಕೋಟಿ – ಈ ಎಲ್ಲ ವಲಯಗಳಲ್ಲೂ ಶಾಂತಿ, ಸಮೃದ್ಧಿ, ಪ್ರೀತಿಗಳನ್ನು ತರುವ, ಎಲ್ಲರಿಗೂ ಸತ್ಯದ ಬೆಳಕನ್ನು ನೀಡುವ ಆಶಯ ಈ ಧರ್ಮದಲ್ಲಿದೆ.